**ಆಲೂರಿನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ**

ಸಿಮಿಸ್ ನಂ. 69/19

| | | |
|---|---|---|
| ಸಾಕ್ಷಿಯ ಹೆಸರು | ಶ್ರೀಮತಿ .ನೇತ್ರ | ಪಿ.ಡಬ್ಲ್ಯು-1 |
| ಗಂಡನ ಹೆಸರು | ಲೋಕೇಶ್ . ಹೆಚ್.ಬಿ. | ಸಿ.ಡಬ್ಲ್ಯು- |
| ವಯಸ್ಸು | 36 **ವರ್ಷ** | |
| ಉದ್ಯೋಗ | ಗೃಹಿಣಿ | ದಿನಾಂಕಃ 01-04-2022 |
| ವಾಸ | ಅಜ್ಜೇನಹಳ್ಳಿ. | ಪ್ರಮಾಣ ವಚನ ಬೋಧಿಸಲಾಯಿತು. |

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀಮತಿ. ಹೆಚ್.ಪಿ.ಎಸ್. ವಕೀಲರಿಂದಃ

ಎದುರುದಾರರಿಂದ ಪರಿಹಾರ ಕೋರಿ ನಾನು ಅರ್ಜಿ ಹಾಕಿದ್ದೇನೆ. 1 ನೇ ಎದುರುದಾರರು ನನ್ನ ಯಜಮಾನನರು. 2 ನೇ ಎದುರುದಾರರು ನನ್ನ ಬಾವ , 3 ನೇ ಎದುರುದಾರರು ನನ್ನ ಅತ್ತೆ. 1 ನೇ ಎದುರುದಾರರು ಆಕಸ್ಮಿಕವಾಗಿ ಪರಿಚಿತರಾಗಿ , ನಾವು ಮದುವೆಯಾಗಿರುತ್ತೇವೆ. ಮದುವೆ ನನ್ನ ಮನೆಯವರು ಹಾಗೂ 1 ನೇ ಎದುರುದಾರರ ಮನೆಯವರ ಸಮಕ್ಷಮ ಹಾಸನದ ರಾಮದೇವರಹಳ್ಳ ದೇವಸ್ಥಾನದಲ್ಲಿ ದಿಃ20-05-2015 ರಲ್ಲಿ ನಡೆಯಿತು. ಮದುವೆಯಾದ ನಂತರ 1 ನೇ ಎದುರುದಾರರ ಮನೆಯಲ್ಲಿ 10 ದಿನ ಇದ್ದೆ. ಆನಂತರ ನನ್ನ ಮನೆಗೆ ಬಂದಿದ್ದು , 1 ತಿಂಗಳಾದರೂ ಎದುರುದಾರರು ನನ್ನನ್ನು ಕರೆದುಕೊಂಡು ಹೋಗಲು ಬರಲಿಲ್ಲ. ನಂತರ ಅವರ ಮನೆಗೆ ನಾನಾಗಿಯೇ ಹೋದಾಗ 2 ಮತ್ತು 3 ನೇ ಎದುರುದಾರರು ನಾನು ಕೆಳಜಾತಿಯವಳೆಂದು ಬೈದಿರುತ್ತಾರೆ. ಆ ದಿನ 1 ನೇ ಎದುರುದಾರರು ಮನೆಯಲ್ಲಿರಲಿಲ್ಲ. ನಂತರ ನಾನು ಎದುರುದಾರರು ಕಾಣೆಯಾಗಿದ್ದಾರೆಂದು ಪೋಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಎದುರುದಾರರು 1 ನೇ ಎದುರುದಾರರನ್ನು ಠಾಣೆಗೆ ಕರೆಸಿದ್ದು , ನಾವಿಬ್ಬರೂ ನಮ್ಮ ಮನೆಗೆ ಹೋಗಿರುತ್ತೇವೆ. ನಂತರ ನಮ್ಮ ಗಂಡನಾದ 1 ನೇ ಎದುರುದಾರರು ಬಂದಿರುವುದಿಲ್ಲ. ಆನಂತರ 2 ನೇ ಎದುರುದಾರರು ವಕೀಲರ ಮೂಲಕ ನನಗೆ ಸುಳ್ಳು ನೋಟೀಸ್ ಕಳುಹಿಸಿರುತ್ತಾರೆ. ನಂತರ ನಾನು ವಕೀಲರ ಮೂಲಕ ಮರುಉತ್ತರ ನೋಟೀಸ್ ಕಳುಹಿಸಿ , ನ್ಯಾಯಾಲಯಕ್ಕೆ ದಾವೆ ಹೂಡಿರುತ್ತೇನೆ.

1 ನೇ ಎದುರುದಾರರಿಗೆ 4 ಎಕರೆ ಕಾಫಿ ತೋಟ ಇದೆ. ಅವರು ಆಟೋ ಓಡಿಸುತ್ತಾರೆ. ಅವರಿಗೆ ಸಾಕಷ್ಟು ಆದಾಯ ಇದೆ. ಆದರೂ ಸಹ ನನಗೆ ಯಾವುದೇ ಜೀವನಾಂಶ ನೀಡದೆ ನಿರ್ಲಕ್ಷಿಸಿರುತ್ತಾರೆ. ನಾನು ಅಂಗವಿಕಲಳಾಗಿದ್ದು ನನಗೆ ತಿಂಗಳಿಗೆ 10 ಸಾವಿರ ಜೀವನಾಂಶದ ಅಗತ್ಯ ಇದೆ. ಆದ ಕಾರಣ ಎದುರುದಾರರ ವಿರುದ್ಧ ಜೀವನಾಂಶಕ್ಕಾಗಿ ಆದೇಶ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ.

1) ದಿಃ29-01-2019 ರ ನೋಟೀಸನ್ನು ನಿಪಿ-1 ಎಂದು,

2) ದಿಃ18-02-2019 ರ ಮರು ಉತ್ತರ ನೋಟೀಸನ್ನು ನಿಪಿ-2 ಎಂದು, ಅಂಚೆ ರಶೀದಿಯನ್ನು ನಿಪಿ2(ಎ) ಎಂದು ,

ಸ್ವೀಕೃತಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

ಮುಂದುವರಿದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್, ಆಲೂರು